ವಿತ್ತ ಸಂಚಿಕೆ
MAY 2024

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ಬ್ಯುಸಿನೆಸ್ ಅಂದರೆ ಒಳಗೊಳ್ಳುವಿಕೆ. ಅದು ಯಾವತ್ತೂ ಕ್ರಿಯಾಶೀಲತೆಯ ದ್ಯೋತಕ

–ರಿಚರ್ಡ್ ಬ್ರಾಸನ್



ನಾಯಕನಾದವನು ಎಂದಿಗೂ ಹಿಂದೆ ತಿರುಗಿ ನೋಡುವುದಿಲ್ಲ ಮುನ್ನುಗ್ಗಿ ನಡೆಯುತ್ತಿರುತ್ತಾನೆ

–ಆನಂದ್ ಮಹಿಂದ್ರಾ




ಸ್ಪರ್ಧಿಗಳಿದ್ದಾರೆಂದು ತಲೆ ಕೆಡಿಸಿಕೊಳ್ಳದಿರು ಗ್ರಾಹಕರಷ್ಟೇ ನಿನ್ನ ಪಾಲಿನ ದೇವರು

–ಜಾಕ್ ಮಾ

# ಬೇಗ ನಿವೃತ್ತಿ: ಬಳಿಕ ಜಗತ್ತು ಸುತ್ತಿ

## ಇವೆಲ್ಲಕ್ಕೂ ಬೇಕು ಸೂಕ್ತ ಕಾರ್ಯತಂತ್ರ






**ನಿವೃತ್ತಿ** ಎನ್ನುವುದು ಬದುಕಿನ ಅಂತ್ಯವಲ್ಲ. ಅದು ಒಬ್ಬ ಮನುಷ್ಯನ ಬದುಕಿನ ಸುವರ್ಣಯುಗದ ಆರಂಭ. ಇದು ವಿಶ್ರಾಂತಿ, ಪರಿಶೋಧನೆ ಮತ್ತು ಪರಿಪೂರ್ಣತೆಯ ಪರ್ವಕಾಲ. ವರ್ಷಗಳ ಕಾಲ ದುಡಿದು ದುಡಿದು ಹಣ್ಣಾದವರಿಗೆ ಪ್ರತಿಫಲವನ್ನು ಉಣ್ಣುವ ಕಾಲ. ಉದ್ಯೋಗದ ಒತ್ತಡಗಳು, ಡಿಮಾಂಡುಗಳಿಲ್ಲದೆ ಮುಕ್ತವಾಗಿ ಬೆರೆಯುವ ಈ ಅವಧಿಯಲ್ಲಿ ತಮ್ಮ ಪ್ರೀತಿಪಾತ್ರರೊಂದಿಗೆ ವಿನೋದದ, ಉಲ್ಲಾಸದ ಕ್ಷಣಗಳನ್ನು ಕಳೆಯುವ ಹೊತ್ತು. ಹೊಸ ಪ್ಯಾಶನ್ನುಗಳನ್ನು ಮೈಗೂಡಿಸಿಕೊಂಡು ಜಗತ್ತನ್ನು ಸುತ್ತಲು, ಹೊಸ ಸಾಹಸಗಳನ್ನು ಮಾಡಲು ಇದಕ್ಕಿಂತ ಸುಸಮಯ ಇನ್ನೊಂದಿಲ್ಲ. ಭಾರತದಲ್ಲಿ ಉದ್ಯೋಗದಿಂದ ನಿವೃತ್ತಿಯಾಗುವ ಸಾಂಪ್ರದಾಯಿಕ ವಯಸ್ಸು ಅರವತ್ತು. ಆದರೆ ಪ್ರತಿಯೊಬ್ಬರೂ ಕಾತರಿಸುವುದು ಈ ವಯಸ್ಸಿನ ಮಿತಿಗೂ ಮೊದಲೇ ನಿವೃತ್ತಿಯಾಗುವುದು. ಅಂದರೆ ಸುವರ್ಣಯುಗವನ್ನು ಸಾಧ್ಯವಾದಷ್ಟು ಬೇಗ ಆರಂಭಿಸುವ ಕನಸು. ಆದರೆ ಹಾಗೆ ಕನಸಿದ್ದರೆ ಸಾಕೇ? ಆ ಗುರಿಯನ್ನು ಮುಟ್ಟಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಲ್ಲವೇ? ಯಸ್, ಈ ಲೇಖನದಲ್ಲಿ ಹೇಳಲು ಹೊರಟಿರುವುದು ಅದನ್ನೇ.

ಒಳ ಪುಟ ನೋಟ

ಹೂಡಿಕೆ ಗಡಿಬಿಡಿ: ತೆರಿಗೆ ಉಳಿದರಷ್ಟೇ ಸಾಕೇ? 3




ಯಾಕೆ ಬೇಕು ಚಿಕ್ಕ ವಯಸ್ಸಿನಲ್ಲೇ ಆರೋಗ್ಯ ವಿಮೆ? 5



ಸಾಂಪ್ರದಾಯಿಕ ನಿವೃತ್ತಿ ವಯಸ್ಸಿನ ನಿಯಮಗಳನ್ನು ಮುರಿದು ಇನ್ನಷ್ಟು ಬೇಗ ನಿವೃತ್ತಿ ಹೊಂದುವ ಮೂಲಕ ಬದುಕನ್ನು ಸಮೃದ್ಧವಾಗಿ ಅನುಭವಿಸುವ ಪ್ರವೃತ್ತಿ ಈಗ ಜಗತ್ತಿನಾದ್ಯಂತ ಚಾಲ್ತಿಯಲ್ಲಿದೆ. ಇದನ್ನೇ ನಾವು ಹಣಕಾಸು ಸ್ವಾತಂತ್ರ್ಯ-ಬಹುಬೇಗ ನಿವೃತ್ತಿ ಎಂದು ವ್ಯಾಖ್ಯಾನಿಸಿದ್ದೇವೆ. ಇದಕ್ಕೆ ಇಂಗ್ಲಿಷ್‌ನಲ್ಲಿ FIRE (financial independence, retire early) ಎಂದು ಕರೆಯಲಾಗಿದೆ. ಈ ವಿಧಾನದ ಮೂಲ ಪರಿಕಲ್ಪನೆ ಇಷ್ಟೇ; ಹೆಚ್ಚು ಹೆಚ್ಚು ಉಳಿತಾಯ ಮಾಡುವುದು ಮತ್ತು ಸಾಂಪ್ರದಾಯಿಕ ಜೀವನ ಶೈಲಿಯನ್ನು ರೂಪಿಸಿಕೊಳ್ಳುವುದು ಹಾಗೂ ನಲವತ್ತನೇ ವಯಸ್ಸಿನ ಆಜೂಬಾಜಿನಲ್ಲಿ ನಿವೃತ್ತಿ ಹೊಂದುವುದು. ಈ ಪರಿಕಲ್ಪನೆಯ ಮೂಲ ಅಷ್ಟೇನೂ ಜನಪ್ರಿಯವಲ್ಲ. ಆದರೆ ವಿಕಿ ರಾಬಿನ್ ಮತ್ತು ಜೋಯ್ ಡೊಮಿನಿಕ್ ಬರೆದಿರುವ **'ಯುವರ್ ಮನಿ ಯುವರ್ ಲೈಫ್'** ಕೃತಿ ಇದನ್ನು ಜನಪ್ರಿಯಗೊಳಿಸಿದೆ. ಇದು ಅಮೆರಿಕದ ಪರಿಕಲ್ಪನೆಯಾದರೂ ಭಾರತದ ಹಿನ್ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಮಾಡೋಣ.

**ಶೇ.50–70ರಷ್ಟು ಉಳಿತಾಯ:** ತನ್ನ 40ನೇ ವಯಸ್ಸಿನಲ್ಲೇ ಒಬ್ಬ ವ್ಯಕ್ತಿ ವೃತ್ತಿ ಬದುಕಿನಿಂದ ನಿವೃತ್ತಿಯಾಗಬೇಕಾದರೆ ಆತ ತನ್ನ ಆದಾಯದಲ್ಲಿ ಶೇ.50ರಿಂದ 70ರಷ್ಟು ಉಳಿತಾಯ ಮಾಡಿರಬೇಕು. FIRE ವಿಧಾನವನ್ನು ಸಾಧಿಸಲು 'ಮೊದಲು ಉಳಿತಾಯ, ಖರ್ಚು ತರುವಾಯ' ಎಂಬ ಕಾರ್ಯತಂತ್ರವನ್ನು ಕಡ್ಡಾಯವಾಗಿ ಅನುಸರಿಸಬೇಕು. ಆಕ್ರಮಣಕಾರಿಯಾದ ಉಳಿತಾಯ ತೀರಾ ಕಷ್ಟಸಾಧ್ಯವಾದರೂ ಕೂಡ ನಿಮ್ಮ ಆದಾಯದಲ್ಲಿ ಸಾಕಷ್ಟು ಪ್ರಮಾಣದ ಉಳಿತಾಯ ಮಾಡುವುದು ಅಸಾಧ್ಯವೇನೂ ಅಲ್ಲ. ಹಾಗೆ ಮಾಡುವ ಮೂಲಕ ತ್ವರಿತ ಗತಿಯಲ್ಲಿ ಸಂಪತ್ತಿನ ಕ್ರೋಡೀಕರಣ ಮಾಡಲು ಮತ್ತು ಅಪೇಕ್ಷಿತ ಜೀವನ ಶೈಲಿಯನ್ನು ಕಾಯ್ದುಕೊಳ್ಳಲು ಸೂಕ್ತ ಪ್ರಮಾಣದ ಹೆಚ್ಚುವರಿ ನಿಧಿಯನ್ನು ಹೊಂದಲು ಸಾಧ್ಯವಾಗುತ್ತದೆ.

**ಆರ್ಥಿಕ ಶಿಸ್ತು:**FIRE ವಿಧಾನವು ಆಡಂಬರವಿಲ್ಲದ ಹಿತಮಿತವಾದ ಜೀವನ, ಅನಗತ್ಯ ವೆಚ್ಚಗಳನ್ನು ಕಡಿತ ಮಾಡುವುದು ಮತ್ತು ಆದಾಯವನ್ನು ಹೆಚ್ಚಿಸಲು ರಚನಾತ್ಮಕ ಮಾರ್ಗಗಳನ್ನು ಕಂಡುಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಇದರ ಸಾಮಾನ್ಯ ಸಿದ್ಧಾಂತಗಳೆಂದರೆ ಬಹುಬೇಗ ಆರಂಭ, ನಿರಂತರತೆಯನ್ನು ಕಾಯ್ದುಕೊಳ್ಳುವುದು ಹಾಗೂ ಶಿಸ್ತುಬದ್ಧವಾದ ಹೂಡಿಕೆ ಮಾಡುವುದು. ಇದರಿಂದ FIRE ಗುರಿಯನ್ನು ಪರಿಣಾಮಕಾರಿಯಾಗಿ ಸಾಧಿಸಲು ಸಾಧ್ಯವಾಗುತ್ತದೆ. ಈ ಹಾದಿಯಲ್ಲಿ ಸಾಲದ ಮೊರೆ ಹೋಗುವುದನ್ನು ತಪ್ಪಿಸಬೇಕು ಹಾಗೂ ನಿವೃತ್ತಿ ನಿಧಿಯಿಂದ ಅವಧಿಗೆ ಮೊದಲೇ ಹಣ ಹಿಂದೆ ತೆಗೆಯುವುದನ್ನು ತಪ್ಪಿಸುವ ಸಲುವಾಗಿ ಸಾಕಷ್ಟು ಪ್ರಮಾಣದ ವಿಮೆ ಮತ್ತು ಹೆಚ್ಚುವರಿ ನಿಧಿಯನ್ನು ಕಾಯ್ದುಕೊಳ್ಳಬೇಕು.

**ಜಾಣ್ಮೆಯ ಹೂಡಿಕೆ:** ಸರಾಸರಿ ಹೂಡಿಕೆದಾರರಿಗೆ ಹೋಲಿಸಿದರೆ ತಮ್ಮ ಆದಾಯದಲ್ಲಿ ಹೆಚ್ಚಿನ



ಭಾಗವನ್ನು ಹೂಡಿಕೆಗೆ ವಿನಿಯೋಗಿಸಿದರೆ FIRE ಗುರಿ ಸಾಧಿಸಲು ಅನುಕೂಲವಾಗುತ್ತದೆ. ಹಾಗಾಗಿ ಈ ಮೊತ್ತವನ್ನು ಗಣನೀಯ ಪ್ರಮಾಣದ ಸಂಪತ್ತು ರೂಪಿಸುವ ಕಡೆಗಳಲ್ಲಿ ಹೂಡಿಕೆ ಮಾಡುವ ನಿಟ್ಟಿನಲ್ಲಿ ಗಮನ ಹರಿಸಬೇಕು. ಸುದೀರ್ಘಾವಧಿಯಲ್ಲಿ ಸಂಪತ್ತನ್ನು ಕಟ್ಟುವ ಉತ್ತಮ ಮಾರ್ಗವೆಂದರೆ ಈಕ್ವಿಟಿ ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು. 25 ವರ್ಷಗಳ ಹಿಂದೆ ಕೇವಲ 10 ಸಾವಿರ ಮೊತ್ತವನ್ನು ಸಣ್ಣ ಎಸ್‌ಐಪಿಯಲ್ಲಿ ಹೂಡಿಕೆ ಮಾಡಿದರೆ ಅದು 1.88 ಕೋಟಿ ರೂ. ಗಂಟಾಗಿ ಬೆಳೆದಿರುತ್ತದೆ. (AMFI ಉತ್ತಮ ಅಭ್ಯಾಸಗಳ ಪ್ರಕಾರ ಈಕ್ವಿಟಿ ಫಂಡ್‌ನಲ್ಲಿ ಹೂಡಿಕೆಯಿಂದ ವಾರ್ಷಿಕ ಶೇ.12.64ರಷ್ಟು ಆದಾಯ ಬರುತ್ತದೆ.-Guidelines Circular No. 135/ BP/109/2023-24 dated Nov. 01, 2023)

ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಸುಲಭವಾದ ಹೂಡಿಕೆಗಳನ್ನು ಮಾಡಬಹುದು. ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಎಸ್‌ಐಪಿಗಳನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಹೂಡಿಕೆ ಕೂಡ ಕೈಗೆಟಕುವಂತಿರುತ್ತದೆ. ಜೊತೆಗೆ ಎಸ್‌ಐಪಿಯಿಂದಾಗಿ ಹೂಡಿಕೆ ಸ್ವಯಂಚಾಲಿತವಾಗಿರುವುದು ಇನ್ನೊಂದು ಪ್ಲಸ್‌ಪಾಯಿಂಟ್.

**25ರ ನಿಯಮ:** FIRE ಗುರಿಯನ್ನು ಸಾಧಿಸಲು ಬೇಕಾದ ನಿವೃತ್ತಿ ಮೂಲಧನವನ್ನು ನಿರ್ಧರಿಸಲು 25ರ ನಿಯಮವು ಮಾರ್ಗದರ್ಶಿ ಸಿದ್ಧಾಂತವಾಗಿದೆ. ಈ ನಿಯಮದ ಪ್ರಕಾರ ನಿವೃತ್ತಿಯ ಹೊತ್ತಿಗೆ ವ್ಯಕ್ತಿಯ ವಾರ್ಷಿಕ ವೆಚ್ಚಗಳು ದುಪ್ಪಟ್ಟಾಗಿರಬೇಕು. ನಿವೃತ್ತಿಯಾಗುವ ಹೊತ್ತಿಗೆ ಬಿಂದಾಸ್ ಆಗಿ ಖರ್ಚು ಮಾಡುವಷ್ಟು ಮೂಲಧನ ಬೆಳೆದಿರಬೇಕು. ಉದಾಹರಣೆಗೆ ಇದನ್ನು ಹೀಗೆ ಲೆಕ್ಕ ಹಾಕಬಹುದು; ಒಬ್ಬ ವ್ಯಕ್ತಿಯ ವಯಸ್ಸು 25 ಆಗಿದ್ದು ಮಾಸಿಕ ಖರ್ಚು 50000 ರೂ. ಆಗಿದ್ದರೆ ಮೊದಲು ಆತ ಹಣದುಬ್ಬರದ ಆಧಾರದಲ್ಲಿ ನಿವೃತ್ತಿ ವೆಚ್ಚಗಳನ್ನು ಲೆಕ್ಕ ಹಾಕಬೇಕು. ಹಣದುಬ್ಬರದ ದರ ಶೇ.6 ಆಗಿದ್ದು ನಿವೃತ್ತಿ ವಯಸ್ಸು 50 ಎಂದು ಪರಿಗಣಿಸಿ. ಈ ದರದಲ್ಲಿ ನಿವೃತ್ತಿಯಾಗುವ ಹೊತ್ತಿಗೆ ಮಾಸಿಕ ವೆಚ್ಚವು ರೂ.2,14.594 ಆಗಿರುತ್ತದೆ. ಅಂತಿಮವಾಗಿ ಅಗತ್ಯವಿರುವ ನಿವೃತ್ತಿಯ ಮೂಲಧನವನ್ನು ಲೆಕ್ಕಾಚಾರ ಮಾಡಲು ವಾರ್ಷಿಕ ವೆಚ್ಚವನ್ನು 25ರಿಂದ ಗುಣಿಸಬೇಕು. ಆಗ ಮೂಲಧನ 25 ಆಗುತ್ತದೆ. (2,14,594 x 12). ಇದು ಅಂತಿಮವಾಗಿ ರೂ. 6.44 ಕೋಟಿಯಷ್ಟಾಗುತ್ತದೆ.

**ನಿವೃತ್ತಿ ಬಳಿಕ ಶೇ.4–6 ನಿಯಮ:** ಚಿಕ್ಕ ವಯಸ್ಸಿಗೆ ಶಾಂತಿಯುತವಾಗಿ ನಿವೃತ್ತಿ ಹೊಂದುವ ಪ್ರಕ್ರಿಯೆ ಮೂಲನಿಧಿಯನ್ನು ರಚನೆ ಮಾಡಿದ ಬಳಿಕ ಮುಗಿದು ಹೋಗುವುದಿಲ್ಲ. ಹಾಗೆ ಮೂಲಧನವನ್ನು ರಚನೆ ಮಾಡಿದ ಒಬ್ಬ ವ್ಯಕ್ತಿ ಆ ನಿವೃತ್ತಿ ನಿಧಿಯಿಂದ ನ್ಯಾಯಯುತವಾಗಿ ಹಣವನ್ನು ವಾಪಸ್ ತೆಗೆಯಬಹುದು. ಹೂಡಿಕೆದಾರರು ಎಸ್‌ಡಬ್ಲ್ಯುಪಿ (ವ್ಯವಸ್ಥಿತ ಹಣ ವಾಪಸಾತಿ ಯೋಜನೆ) ಯನ್ನು ಆರಂಭಿಸಬಹುದು. ಇದರಿಂದ ಪೂರ್ವನಿರ್ಧರಿತ ಸಮಯ ಮತ್ತು ಮೊತ್ತಗಳ ಮೂಲಕ ಸ್ವಯಂಚಾಲಿತವಾಗಿ ವ್ಯವಸ್ಥಿತ ನಗದಿನ ಹರಿವಿಗೆ ಅವಕಾಶ ಮಾಡಿಕೊಡಬಹುದು.

ಚಿಕ್ಕ ವಯಸ್ಸಿನಲ್ಲಿ ನಿವೃತ್ತಿ ಹೊಂದಲು FIRE ಉತ್ತೇಜನ ನೀಡುವುದರಿಂದ ನೀವು ನಿವೃತ್ತಿ ಅವಧಿಯಲ್ಲಿ ಇರುವ ವರ್ಷಗಳ ಸಂಖ್ಯೆಯನ್ನೂ ಹೆಚ್ಚಿಸಬಹುದು. ಉದಾಹರಣೆಗೆ ನಿಮ್ಮ ನಿರೀಕ್ಷಿತ ಆಯಸ್ಸು 80 ಎಂದಿದ್ದರೆ 60ರ ಸಾಂಪ್ರದಾಯಿಕ ವಯಸ್ಸಿಗೆ ಬದಲಾಗಿ 45ಕ್ಕೆ ನಿವೃತ್ತಿ ಹೊಂದಲು ಬಯಸುತ್ತೀರಿ. ಆಗ ನಿಮ್ಮ ನಿವೃತ್ತಿ ನಂತರದ ವರ್ಷಗಳು 35. ಈ 35 ವರ್ಷಗಳನ್ನು ಹಣಕಾಸಿನ ಒತ್ತಡವಿಲ್ಲದೆ ಕಳೆಯಲು ತಮ್ಮ ನಿವೃತ್ತಿ ಮೂಲನಿಧಿಯಿಂದ ವಾರ್ಷಿಕ ವೆಚ್ಚವಾಗಿ ಶೇ.4ರಿಂದ ಶೇ.6ರ ವರೆಗೆ ಮಾತ್ರ ವಾಪಸ್ ತೆಗೆಯಬಹುದು.

**ಕೊನೆಯ ಮಾತು:** ಆಕ್ರಮಣಕಾರಿ ಉಳಿತಾಯಗಳು ಮತ್ತು ಹೂಡಿಕೆಗಳಂತಹ ಕಾರ್ಯತಂತ್ರಗಳ ಮೂಲಕ ಹಣಕಾಸು ಸ್ವಾತಂತ್ರ್ಯ ಹಾಗೂ ಚಿಕ್ಕ ವಯಸ್ಸಿನಲ್ಲಿ ನಿವೃತ್ತಿ ಹೊಂದಲು ಸಾಧ್ಯವಾಗುತ್ತದೆ. ನಲವತ್ತು ವರ್ಷದಷ್ಟು ಚಿಕ್ಕ ವಯಸ್ಸಲ್ಲದೇ ಹೋದರೂ 50 ಅಥವಾ 55ರ ವಯಸ್ಸಿನಲ್ಲಿ ನಿವೃತ್ತಿ ಪಡೆದುಕೊಳ್ಳಬಹುದು. ಹಾಗೆ ಮಾಡಲು ಹೊರಟಾಗ ಅದಕ್ಕೆ ಸ್ಪಷ್ಟವಾದ ಯೋಜನೆ ರೂಪಿಸುವುದು ಮುಖ್ಯ. ಪ್ರತಿಯೊಬ್ಬ ವ್ಯಕ್ತಿ ಕೂಡ ಭಿನ್ನ. ಆತ ಭಿನ್ನವಾದ ಆದಾಯ, ಹಣಕಾಸು ಸ್ಥಿತಿ, ಜವಾಬ್ದಾರಿಗಳು, ರಿಸ್ಕ್‌ಗಳನ್ನು ಎದುರಿಸುವ ಸಾಮರ್ಥ್ಯ ಮತ್ತು ಹಣಕಾಸು ಅಗತ್ಯಗಳು ಕೂಡ ಭಿನ್ನವಾಗಿರುತ್ತವೆ. ಹಾಗಾಗಿ FIRE ಗುರಿಯನ್ನು ಸಾಧಿಸಲು ಸಿದ್ಧ ಮಾದರಿಯ ಬ್ಲೂಪ್ರಿಂಟ್ ಅಗತ್ಯವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ವಿಶಿಷ್ಟವಾದ ಅಗತ್ಯಗಳನ್ನು ಅರ್ಥ ಮಾಡಿಕೊಂಡು FIRE ಸಾಧಿಸಲು ಬೇಕಾದ ನಿಮ್ಮ ಪಯಣಕ್ಕೆ ಮಾರ್ಗದರ್ಶನ ಮಾಡಲು ಒಬ್ಬ ಮ್ಯುಚ್ಯುಲ್ ಫಂಡ್ ವಿತರಕ ಅಥವಾ ಹಣಕಾಸು ಸಲಹೆಗಾರನಿಂದ ಸಾಧ್ಯ. ಇಂತಹ ಸಲಹೆಗಾರರನ್ನು ಈಗಲೇ ಸಂಪರ್ಕಿಸಿ

# ಹೂಡಿಕೆಯ ಗಡಿಬಿಡಿ: ತೆರಿಗೆ ಉಳಿದರಷ್ಟೇ ಸಾಕೇ?




**ಇನ್ನೇನು ತೆರಿಗೆ ವಿವರ ಸಲ್ಲಿಸಬೇಕು ಎನ್ನುವ ಹೊತ್ತಿನಲ್ಲಿ ಯಾವೆಲ್ಲ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಬೇಕು ಎಂದು ಗಡಿಬಿಡಿ ಮಾಡುತ್ತೇವೆ. ಆದಷ್ಟು ತೆ-ರಿಗೆ ಉಳಿತಾಯ ಮಾಡುವುದಷ್ಟೇ ನಮ್ಮ ಉದ್ದೇಶವಾಗಿರುತ್ತದೆ. ಹಾಗಾದರೆ ತೆ-ರಿಗೆ ಉಳಿತಾಯ ಮಾಡುವುದಷ್ಟೇ ಮುಖ್ಯ ಗುರಿಯಾಗಬೇಕೇ? ನಮ್ಮ ಆದ್ಯತೆ ಏನು? ಎಂಬ ಪ್ರಶ್ನೆಗಳು ಸಹಜ ಮತ್ತು ಸಾಮಾನ್ಯ. ಸದೃಢವಾದ ಹಣಕಾಸು ಯೋಜನೆಯೊಂದಿಗೆ ಹೂಡಿಕೆಗಳನ್ನು ಮಾಡಿದರೆ ತೆರಿಗೆ ಹೊರೆಯನ್ನು ಕಡಿಮೆ ಮಾಡುವುದರ ಜೊತೆಗೆ ಸಂಪತ್ತು ಸೃಷ್ಟಿಯನ್ನೂ ಉತ್ತೇಜಿಸಿದಂತಾಗುತ್ತದೆ. ಜೊತೆಗೆ ಆಸ್ತಿ ಹಂಚಿಕೆಯಲ್ಲಿಯೂ ಯಾವ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬುದು ಕೂಡ ಮುಖ್ಯ. ಸಮಗ್ರ ವಿಧಾನವನ್ನು ಅನುಸ-ರಿಸುವ ಮೂಲಕ ತೆರಿಗೆಯೂ ಉಳಿತಾಯವಾಗಬೇಕು ಮತ್ತು ಸಂಪತ್ತೂ ವೃದ್ಧಿಯಾಗಬೇಕು ಎನ್ನುವ ನಿಟ್ಟಿನಲ್ಲಿ ಯೋಚಿಸುವುದು ಹೇಗೆ ಎಂಬುದರ ಅವಲೋಕನ ಇಲ್ಲಿದೆ.**

**ಇದೀಗ** ಹಣಕಾಸು ವರ್ಷದ ಆರಂಭ. ಕೊನೆಯ ಕ್ಷಣದಲ್ಲಿ ತೆರಿಗೆ ಸಲ್ಲಿಕೆ ಮಾಡುತ್ತಿರುವ ಬಗ್ಗೆ ನಿಮಗೆ ನೀವೇ ಶಪಿಸುವ ಕಾಲ ಮತ್ತು ಹಣ-ಕಾಸು ವರ್ಷದ ಕೊನೆಯಲ್ಲಿ ತೆರಿಗೆ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಕೊನೆಯ ಕ್ಷಣದಲ್ಲಿ ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳುತ್ತೀರಿ. ಹೀಗೆ ತರಾತುರಿಯ ನಿರ್ಧಾರಗಳನ್ನು ಕೈಗೊಳ್ಳುವುದ-ರಿಂದ ನಿಮಗೇ ಮುಳುವಾಗಿ ಪರಿಣಮಿಸಬಹುದು.

ಅನೇಕ ಸಂದರ್ಭಗಳಲ್ಲಿ ತೆರಿಗೆ ಸಲ್ಲಿಕೆಯ ಅಂತಿಮ ಗಡುವು ಸಮೀಪಿಸುತ್ತಿರುವ ಹೊತ್ತಿನಲ್ಲಿ ಹೂಡಿಕೆ ಮಾಡಲು ಮುಂದಾದರೆ ಅನೇಕ ಮೂಲಭೂತ ಹೂಡಿಕೆ ಅಂಶಗಳನ್ನು ಕೈಬಿಡುವ ಸಾಧ್ಯತೆಗಳಿರುತ್ತವೆ. ಅಂತಹ ಅಂಶಗಳೆಂದರೆ ಹಣಕಾಸು ಉದ್ದೇಶಗಳು, ಅಪಾಯಗಳನ್ನು ಸಹಿಸಿಕೊಳ್ಳುವಿಕೆ, ಆದಾಯ ಗಳಿಕೆಯ ನಿರೀಕ್ಷೆ ಮತ್ತು ಕಾಲಮಿತಿ. ಅಂತಹ ಸಂದರ್ಭದಲ್ಲಿ ಎದುರಾಗುವ ಪ್ರಶ್ನೆಯೇ: ಕೇವಲ ತೆರಿಗೆ ಉಳಿಸಲಷ್ಟೇ ಹೂಡಿಕೆ ಮಾಡಬೇಕೇ? ಹೂಡಿಕೆ ಅಥವಾ ತೆರಿಗೆ ಉಳಿತಾಯ- ಇವುಗಳಲ್ಲಿ ಯಾವುದು ನಮ್ಮ ಆದ್ಯತೆಯಾಗಬೇಕು?

ತೆರಿಗೆ ಉಳಿತಾಯ ಮಾಡಬೇಕು ಎನ್ನುವುದರಲ್ಲಿ ಬೇರೆ ಮಾತೇ ಇಲ್ಲ. ಆದರೆ ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳುವ ಹಂತದಲ್ಲಿ 'ಅದೊಂದೇ ಮುಖ್ಯವಾಗುವುದಿಲ್ಲ. ಕೇವಲ ತೆ-ರಿಗೆ ಉಳಿತಾಯ ಮಾಡಬೇಕು ಎನ್ನುವ ಏಕೈಕ ಉದ್ದೇಶದಿಂದ ಹೂಡಿಕೆಯನ್ನು ಮಾಡಿದರೆ ಹಣಕಾಸು ಬೆಳವಣಿಗೆಯ ಅವಕಾಶವನ್ನು ಮಿತಿಗೊಳಿಸಿದಂತಾಗುತ್ತದೆ. ಸದೃಢವಾದ ಹಣ-ಕಾಸು ಯೋಜನೆಯೊಂದಿಗೆ ಹೂಡಿಕೆಗಳನ್ನು ಮಾಡಿದರೆ ತೆರಿಗೆ ಹೊರೆಯನ್ನು ಕಡಿಮೆ ಮಾಡುವುದರ ಜೊತೆಗೆ ಸಂಪತ್ತು ಸೃಷ್ಟಿಯನ್ನೂ ಉತ್ತೇಜಿಸಿದಂತಾಗುತ್ತದೆ. ತೆರಿಗೆ ಉಳಿತಾಯಕ್ಕೆ ಹೂಡಿಕೆ ಮಾಡುವ ಸಂದರ್ಭದಲ್ಲಿ ಅದು ನಿಮ್ಮ ಆಸ್ತಿ ಹಂಚಿಕೆಯಲ್ಲಿಯೂ ಹೊಂದಾಣಿಕೆಯಾಗುವಂತೆ ನೋಡಿಕೊಳ್ಳಬೇಕು ಮತ್ತು ನಿಮ್ಮ ಹಣ-ಕಾಸು ಅಗತ್ಯಗಳನ್ನು ಪೂರೈಸಿಕೊಳ್ಳಲು ಸಹಾಯವಾಗಬೇಕು.

ಸಮಗ್ರ ವಿಧಾನವನ್ನು ಅನುಸರಿಸುವ ಮೂಲಕ ಕೇವಲ ತೆರಿಗೆ ಉಳಿತಾಯಕ್ಕಾಗಿ ಮಾತ್ರ ಹೂಡಿಕೆ ಮಾಡುವುದನ್ನು ತಪ್ಪಿಸಲು ಕೆಲವು ಮುಖ್ಯ ಕಾರಣಗಳು ಯಾವುವು ಎಂಬುದನ್ನು ನೋಡೋಣ:

ಹಣಕಾಸು ಅಗತ್ಯಗಳೊಂದಿಗೆ ತಳಕು ಹಾಕದ ಆಸ್ತಿ ಹಂಚಿಕೆ: ಕೇವಲ ತೆರಿಗೆ ಉಳಿತಾಯ ಉದ್ದೇಶದಿಂದ ಹಣಕಾಸು ಉತ್ಪನ್ನದಲ್ಲಿ ಹೂಡಿಕೆ ಮಾಡಿದಾಗ ನಿಮ್ಮ ಗುರಿಗಳು ಅಥವಾ ಅಗತ್ಯಗಳನ್ನು ಪೂರೈಸದ ಆಸ್ತಿ ಹಂಚಿಕೆಯಲ್ಲಿ ನೀವು ಸಿಕ್ಕಿಹಾಕಿಕೊಳ್ಳಬಹುದು. ಹಾಗಾಗಿ ನಿಮ್ಮ ಅಗತ್ಯಗಳೊಂದಿಗೆ ತಳಕು ಹಾಕಿಕೊಳ್ಳುವ ಹಣಕಾಸು ಯೋಜನೆಯನ್ನು ರೂಪಿಸಲು ನಿಮ್ಮ ಹಣಕಾಸು ಅಗತ್ಯಗಳು, ಅಪಾಯಗಳನ್ನು ಅರಗಿಸಿಕೊಳ್ಳುವ ಶಕ್ತಿ, ಜೀವನದ ಹಂತಗಳನ್ನು ಆಧರಿಸಿದ ಅಗತ್ಯಗಳು, ಕಾಲಮಿತಿ ಮುಂತಾದ ಅಂಶಗಳನ್ನು ಪರಿಗಣಿಸಬೇಕು.

ಉದಾಹರಣೆಗೆ, ನೀವಿನ್ನೂ ಯುವಕರಾಗಿದ್ದು, ಅವಿವಾಹಿತ ವೇತನ ಪಡೆಯುವ ವ್ಯಕ್ತಿಯಾಗಿದ್ದರೆ

ಮತ್ತು ಮದುವೆ, ರಜೆ, ಪ್ರವಾಸ ಇತ್ಯಾದಿ ಸುದೀರ್ಘಾವಧಿ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಂಪತ್ತನ್ನು ಕ್ರೋಡೀಕರಿಸಬೇಕಿದ್ದರೆ ನಿಮ್ಮ ಪೋರ್ಟ್‌ಫೋಲಿಯೊಗೆ ಪ್ರಗತಿ ಆಧಾರಿತ ಆಸ್ತಿಗಳ ಅಗತ್ಯವಿದೆ. ಬಡ್ಡಿ ಆಧಾರಿತ ಆದಾಯವನ್ನು ತರುವ ಆಸ್ತಿಗಳಲ್ಲಿ ಹೂಡಿಕೆ ಮಾಡುವುದರಿಂದ ತೆರಿಗೆ ಉಳಿತಾಯ ಮಾಡಲು ಸಾಧ್ಯವಾಗುತ್ತದೆ. ಸುದೀರ್ಘಾವಧಿಯಲ್ಲಿ ಈಕ್ವಿಟಿಯಂತಹ ಬೆಳವಣಿಗೆ ಆಧಾರಿತ ಆಸ್ತಿಗಳಲ್ಲಿ ಆದಾಯದ ಪ್ರಮಾಣ ಅಧಿಕ. ಅದು ನಿಶ್ಚಿತ ಆದಾಯದ ಉತ್ಪನ್ನಗಳಿಗಿಂತ ಹೆಚ್ಚಿನದ್ದು.

**ಅಸಮರ್ಪಕ–ಅನುಚಿತ ಬಂಡವಾಳ ವಿತರಣೆ:** ತೆರಿಗೆ ಉಳಿತಾಯ ಮಾಡುವುದಷ್ಟೇ ಹೂಡಿಕೆಯ ಉದ್ದೇಶವಾಗಿದ್ದಾಗ ನಿಮಗಿರುವುದು ತೀರಾ ಸೀಮಿತ ಆಯ್ಕೆಗಳು ಮಾತ್ರ. ಇದರಿಂದ ಬಂಡವಾಳ ವಿತರಣೆ ಸಮರ್ಪಕವಾಗಿ ಆಗದೇ ಇರಬಹುದು. ಹಾಗೆ ಆದಾಗ ಸಂಭವನೀಯ ಗಳಿಕೆಯ ಮೇಲೆ ಪೆಟ್ಟು ಬೀಳುತ್ತದೆ ಮತ್ತು ಕೇವಲ ಕೆಲವೇ ಆಸ್ತಿ ವರ್ಗಗಳ ನಿರ್ವಹಣೆಯನ್ನು ಮಾತ್ರ ನಂಬಿಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ತೆರಿಗೆಯನ್ನು ಉಳಿತಾಯ ಮಾಡುವುದಕ್ಕಾಗಿ ಅಧಿಕ ಪ್ರೀಮಿಯಂನ ವಿಮಾ ಪಾಲಿಸಿಗಳನ್ನು ಖರೀದಿ ಮಾಡುವ ಲಕ್ಷಾಂತರ ಮಂದಿ ಈಗಲೂ ಇದ್ದಾರೆ. ತೆರಿಗೆಯನ್ನು ತಗ್ಗಿಸಲು ಇದು ಉತ್ತಮ ಮಾರ್ಗವೆಂದು ಅವರು ಹೇಳಿಕೊಳ್ಳುತ್ತಾರೆ. ಎರಡು ಮೂರು ವರ್ಷಗಳ ಬಳಿಕ ಈ ವಿಮಾ ಪ್ರೀಮಿಯಂ ಅತ್ಯಂತ ದುಬಾರಿಯದ್ದು ಎನ್ನುವುದು ಅರಿವಾಗುತ್ತದೆ. ಅಂತಹ ಸಂದರ್ಭದಲ್ಲಿ ಪಾಲಿಸಿಯನ್ನು ನಿಲ್ಲಿಸುವುದು ಯಾವುದೇ ರೀತಿಯಲ್ಲಿ ಪ್ರಯೋಜನಕಾರಿ ಆಗುವುದಿಲ್ಲ.

ಸದೃಢವಾದ ಹೂಡಿಕೆ ಕಾರ್ಯತಂತ್ರಕ್ಕೆ ಅತ್ಯುತ್ತಮ ಬಂಡವಾಳ ವಿತರಣೆಯ ಪೋರ್ಟ್‌ಫೋಲಿಯೊ ಅಡಿಪಾಯವಾಗಿದೆ. ಷೇರು, ಮ್ಯುಚ್ಯುಯಲ್ ಫಂಡ್, ನಿಶ್ಚಿತ–ಆದಾಯದ ಸೆಕ್ಯುರಿಟಿ, ರಿಯಲ್ ಎಸ್ಟೇಟ್ ಮತ್ತು ತೆರಿಗೆ ಉಳಿತಾಯದ ಆಯ್ಕೆಗಳನ್ನು ಹೊರತುಪಡಿಸಿದ ಪರ್ಯಾಯ ಹೂಡಿಕೆಗಳನ್ನು ಒಳಗೊಂಡ ವೈವಿಧ್ಯತೆಯನ್ನು ಪರಿಗಣಿಸುವುದು ಉತ್ತಮ. ನಾನಾ ವಿಧದ ಆಸ್ತಿ ವರ್ಗಗಳಲ್ಲಿ ಹೂಡಿಕೆಗಳನ್ನು ಮಾಡುವುದರಿಂದ ಅಪಾಯವನ್ನು ತಗ್ಗಿಸಬಹುದು ಮತ್ತು ಸಂಪತ್ತನ್ನು ವೃದ್ಧಿಸುವ ಅವಕಾಶಗಳನ್ನು ಹೆಚ್ಚಿಸಿಕೊಳ್ಳಬಹುದು.

**ಸುದೀರ್ಘಾವಧಿ ಬದ್ಧತೆ:** ಸಾಮಾನ್ಯವಾಗಿ ತೆರಿಗೆ ಉಳಿತಾಯ ಸಾಧನಗಳು ಸುದೀರ್ಘ 'ಲಾಕ್–ಇನ್' ಅವಧಿಯನ್ನು ಹೊಂದಿರುವುದು ಹೂಡಿಕೆದಾರರ ಪಾಲಿಗೆ ಕೈಕಟ್ಟಿ ಹಾಕಿದ ಪರಿಸ್ಥಿತಿ. ಈ ಸಾಧನಗಳು ತೆರಿಗೆ ಪ್ರಯೋಜನಗಳನ್ನು ಹೊಂದಿದ್ದರೂ ಕೂಡ ಅಗತ್ಯವಿದ್ದಾಗ ಸೌಲಭ್ಯ ಬಳಸಿಕೊಳ್ಳಲು ಕಷ್ಟವಾಗುತ್ತದೆ. ಬದಲಾಗುತ್ತಿರುವ




ಹಣಕಾಸು ಸ್ಥಿತಿಗಳಿಗೆ ತಕ್ಕಂತೆ ಹೂಡಿಕೆದಾರರು ಸ್ಪಂದಿಸಲು ಮತ್ತು ಕೈಗೆ ದಕ್ಕುವ ಅವಕಾಶಗಳನ್ನು ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅನೇಕ ಹಣಕಾಸು ಅಗತ್ಯಗಳಿಗೆ ಅಧಿಕ ಲಿಕ್ವಿಡಿಟಿ ಬೇಕಾಗುತ್ತದೆ ಮತ್ತು ಅವುಗಳಿಗೆ ಅಲ್ಪಾವಧಿ ಚೌಕಟ್ಟಿರುತ್ತವೆ. ಉದಾಹರಣೆಗೆ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಡೌನ್–ಪೇಮೆಂಟ್‌ಗಾಗಿ ಉಳಿತಾಯ ಮಾಡುವುದಾದರೆ ಐದು ವರ್ಷಗಳ 'ಲಾಕ್–ಇನ್' ಅವಧಿಯನ್ನು ಹೊಂದಿರುವ ಉತ್ಪನ್ನದಲ್ಲಿ ಹೂಡಿಕೆ ಮಾಡಲು ಸಾಧ್ಯವಿಲ್ಲ.

**ನಿಧಾನ ಪ್ರಗತಿ:** ತೆರಿಗೆ ಉಳಿತಾಯ ಸಾಧನಗಳಿಗೆ ಸಂಬಂಧಪಟ್ಟಂತೆ ಸುದೀರ್ಘಾವಧಿ ಬದ್ಧತೆ ಇನ್ನೂ ಒಂದು ಬಹುದೊಡ್ಡ ಅನನುಕೂಲವೆಂದರೆ ಮೂಲ ನಿಧಿಯ ನಿಧಾನ ಗತಿಯ ಪ್ರಗತಿ. ಪಿಪಿಎಫ್ ಮತ್ತು ಎನ್‌ಎಸ್‌ಸಿಯಂತಹ ಕೆಲವು ಸರ್ಕಾರಿ ಬೆಂಬಲಿತ ತೆರಿಗೆ ಉಳಿತಾಯ ಹೂಡಿಕೆ ಮಾರ್ಗಗಳು ಅತ್ಯಂತ ಸುರಕ್ಷಿತ ಸಾಧನಗಳಾದರೂ ಕೂಡ ಕಡಿಮೆ ಆದಾಯವನ್ನು ಕೊಡುತ್ತವೆ. ಈ ಉತ್ಪನ್ನಗಳು ಸಾಮಾನ್ಯವಾಗಿ ಹಣದುಬ್ಬರ ಮತ್ತು ಮರು–ಹೂಡಿಕೆ ಅಪಾಯಕ್ಕೆ ತೆರೆದುಕೊಳ್ಳುವುದು ಇನ್ನೊಂದು ಮೈನಸ್–ಪಾಯಿಂಟ್. ಹಾಗಾಗಿ ಇತರ ಭರಪೂರ ಹೂಡಿಕೆ ಸಾಧನಗಳಿಗೆ ಹೋಲಿಸಿದರೆ ಈ ಹೂಡಿಕೆ ನಿಧಿಯ ಪ್ರಗತಿ ಪ್ರಮಾಣ ಕಡಿಮೆ.

ಒಂದು ವೇಳೆ ಹಣಕಾಸು ಅಗತ್ಯಗಳು ಅಧಿಕ ಅಪಾಯವನ್ನು ಹೊಂದಿದ್ದು ಹೆಚ್ಚಿನ ಗಳಿಕೆಯನ್ನು ಪಡೆಯುತ್ತಿದ್ದರೆ ಕೇವಲ ತೆರಿಗೆ ಉಳಿತಾಯದ ಸಾಧನಗಳು ಮಾತ್ರ ಸಾಕಾಗುವುದಿಲ್ಲ.ಆದರೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿ ಅಡಿಯಲ್ಲಿ ಬರುವ ಇಎಲ್‌ಎಸ್‌ಎಸ್ ಇನ್ನೊಂದು ಉತ್ತಮ ತೆರಿಗೆ ಉಳಿತಾಯ ಮ್ಯುಚ್ಯುಯಲ್ ಫಂಡ್ ಆಗಿದೆ.ಇಲ್ಲಿ ಮುಖ್ಯವಾಗಿ ಈಕ್ವಿಟಿಗಳಲ್ಲಿ ಹೂಡಿಕೆ ಮಾಡುವುದರಿಂದ ಹೂಡಿಕೆದಾರರಿಗೆ ತೆರಿಗೆ ಉಳಿತಾಯ ಮತ್ತು ಸಂಪತ್ತು ವೃದ್ಧಿಯ ಡಬಲ್ ಪ್ರಯೋಜನಗಳು ಸಿಗುತ್ತವೆ.

**ವ್ಯವಸ್ಥಿತ ಹೂಡಿಕೆಗಳು:** ಹಣಕಾಸು ವರ್ಷದ ಕೊನೆಯಲ್ಲಿ ತೆರಿಗೆ ಉಳಿತಾಯದ ಸಾಧನಗಳ ಮೇಲೆ ಗಮನ ಹರಿಸುವುದಕ್ಕಿಂತ ಹೂಡಿಕೆದಾರರು ಪ್ರತಿ ತಿಂಗಳೂ ಹೂಡಿಕೆ ಮಾಡುವುದನ್ನು ಪರಿಗಣಿಸುವುದು ಉತ್ತಮ. ಉದಾಹರಣೆಗೆ, ಹೂಡಿಕೆದಾರರು ಇಎಲ್‌ಎಸ್‌ಎಸ್‌ನಲ್ಲಿ ಹೂಡಿಕೆ ಮಾಡಲು ಬಯಸಿದರೆ ಇಎಲ್‌ಎಸ್‌ಎಸ್‌ನಲ್ಲಿ ಎಸ್‌ಐಪಿ ಮಾಡುವುದರಿಂದ ತೆರಿಗೆ ಪ್ರಯೋಜನ ಮಾತ್ರವಲ್ಲದೆ ಈಕ್ವಿಟಿ ಮೂಲಕವೂ ಸಂಪತ್ತಿನ ಸೌಧವನ್ನು ಕಟ್ಟುವ ಬಹುದೊಡ್ಡ ಅವಕಾಶ ಲಭ್ಯವಾಗುತ್ತದೆ.

**ಬಾಟಮ್‌ಲೈನ್:** ಹೂಡಿಕೆ ಮಾಡಲು ನಿರ್ಧಾರ ಮಾಡಿದಿರೆಂದರೆ ಅದರ ಉದ್ದೇಶ ತೆರಿಗೆ ಉಳಿತಾಯ ಮಾತ್ರ ಆಗಿರಬಾರದು. ಬದಲಾಗಿ ಹಣಕಾಸು ಅಗತ್ಯಗಳು ಮತ್ತು ರಿಸ್ಕ್‌ನ್ನು ಅರಗಿಸಿಕೊಳ್ಳುವ ಶಕ್ತಿ ಯಾವತ್ತೂ ಯಾವುದೇ ಹೂಡಿಕೆ ನಿರ್ಧಾರದ ಮುಖ್ಯ ಉದ್ದೇಶವಾಗಿರಬೇಕು. ಯಾರೇ ಆಗಲಿ ತೆರಿಗೆ ಉಳಿತಾಯದ ಹೂಡಿಕೆಗಳು ಯಾವತ್ತೂ ನಮ್ಮ ಹಣಕಾಸು ವ್ಯವಹಾರದ ರಕ್ತ–ಮಾಂಸವಿದ್ದಂತೆ. ಆದರೆ ಹಣಕಾಸಿನ ಯೋಗಕ್ಷೇಮದ ವಿಚಾರ ಬಂದಾಗ ಅದು ಕೇವಲ ಈ ಸಮೀಕರಣದ ಒಂದು ಭಾಗವಾಗಿರಬೇಕು ಅಷ್ಟೇ.ತೆರಿಗೆ ಉಳಿತಾಯ ಸಾಧನಗಳ ಜೊತೆಗೇ ಇತರ ಆಸ್ತಿ ವರ್ಗಗಳನ್ನೂ ಪರಿಗಣಿಸುವ ಸಮಗ್ರ ವಿಧಾನದಿಂದ ವೈವಿಧ್ಯಮಯವಾದ ಪೋರ್ಟ್‌ಫೋಲಿಯೋ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೇವಲ ಸಂಪತ್ತಿನ ಕ್ರೋಡೀಕರಣವಷ್ಟೇ ಇದರ ಗುರಿಯಲ್ಲ, ತೆರಿಗೆ ಬಾಧ್ಯತೆಗಳನ್ನೂ ಕಡಿಮೆ ಮಾಡಲು ಸಾಧ್ಯವಾಗುತ್ತದೆ. ನಾನಾ ಹಣಕಾಸು ಅಗತ್ಯಗಳು ಮತ್ತು ರಿಸ್ಕ್ ಪ್ರೊಫೈಲ್ ಹೊಂದಿದ ಪ್ರತಿಯೊಬ್ಬ ಹೂಡಿಕೆದಾರ ಕೂಡ ವಿಶಿಷ್ಟ.ಸರಿಯಾದ ಹೂಡಿಕೆ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಬೇಕು ಮತ್ತು ಹೂಡಿಕೆ ಮಾಡುವಾಗ ವಿವೇಚನಾಯುಕ್ತವಾದ ವಿಧಾನ ಅನುಸರಿಸುವುದು ಹೇಗೆ ಎಂಬುದಕ್ಕೆ ಮ್ಯುಚ್ಯುಯಲ್ ಫಂಡ್ ವಿತರಕ ಅಥವಾ ಹೂಡಿಕೆ ಸಲಹೆದಾರರ ಮಾರ್ಗದರ್ಶನ ಪಡೆಯುವುದನ್ನು ಮರೆಯಬಾರದು.



# ಯಾಕೆ ಬೇಕು ಚಿಕ್ಕ ವಯಸ್ಸಿನಲ್ಲೇ ಆರೋಗ್ಯ ವಿಮೆ?

**"ನಾನಿನ್ನೂ** ಯುವಕ, ಯಾವತ್ತೂ ವ್ಯಾಯಾಮ ಮಾಡುತ್ತೇನೆ. ಆರೋಗ್ಯವಂತನಾಗಿರುವೆ, ಸದೃಢನಾಗಿದ್ದೇನೆ. ಆದರೆ ನನಗೆ ಆರೋಗ್ಯ ವಿಮೆ ಅಗತ್ಯವಿದೆಯೇ?"ಯಾರಾದರೂ ಆರೋಗ್ಯ ವಿಮೆ ಬಗ್ಗೆ ಪ್ರಸ್ತಾಪ ಮಾಡಿದಾಗ ತಕ್ಷಣ ಇಂತಹ ಪ್ರಶ್ನೆಯೊಂದು ಎದುರಾಗಿರುತ್ತದೆ.ಇದು ಸಲ್ಪ ವಿಚಿತ್ರ ಅನ್ನಿಸಬಹುದು.ಆದರೆ ಸಾಧ್ಯವಾದಷ್ಟು ಚಿಕ್ಕ ವಯಸ್ಸಿನಲ್ಲೇ ಆರೋಗ್ಯ ವಿಮೆ ಪಾಲಿಸಿ ಮಾಡಿಸುವುದು ಉತ್ತಮ.ಅದರಲ್ಲಿಯೂ ನೀವು ಗಟ್ಟಿಮುಟ್ಟಾಗಿ, ಆರೋಗ್ಯವಂತರಾಗಿ ಇದ್ದಾಗಲೇ ವಿಮೆ ಮಾಡಿಸುವುದು ಸುರಕ್ಷಿತ.

ಚಿಕ್ಕ ವಯಸ್ಸಿನಲ್ಲಿದ್ದಾಗಲೇ ನಿಮಗೆ ಮತ್ತು ನಿಮ್ಮ ಕುಟುಂಬದ ಸದಸ್ಯರಿಗೆ ಆರೋಗ್ಯ ವಿಮೆಯನ್ನು ಮಾಡಿಸುವುದು ಯಾಕೆ ಎಂಬುದರ ಬಗ್ಗೆ ಚರ್ಚೆ ಮಾಡೋಣ ಬನ್ನಿ.

**ಹೆಚ್ಚು ಆಯ್ಕೆಗಳಿರುವುದು ಉತ್ತಮ:** ಚಿಕ್ಕ ವಯಸ್ಸಿನಲ್ಲೇ ಆರೋಗ್ಯ ವಿಮೆ ಮಾಡಿಸಿಕೊಂಡರೆ ಪ್ಲಾನ್‌ಗಳ ಆಯ್ಕೆ ವಿಚಾರದಲ್ಲಿ ಸಾಕಷ್ಟು ಅವಕಾಶಗಳಿರುತ್ತವೆ. ಒಂದು ನಿರ್ದಿಷ್ಟ ವಯಸ್ಸು ಮುಗಿದ ಬಳಿಕ ರೋಗ ನಿರೋಧಕ ಶಕ್ತಿ ದುರ್ಬಲವಾಗುತ್ತದೆ ಮತ್ತು ಜೀವನಕ್ರಮಕ್ಕೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಈ ಅವಧಿಯಲ್ಲಿ ಆಸ್ತಮಾ, ಕ್ಯಾನ್ಸರ್, ಮಧುಮೇಹ, ಅತಿಯಾದ ರಕ್ತದೊತ್ತಡ ಇತ್ಯಾದಿ ಕಾಯಿಲೆಗಳು ಬರುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಆಗ ಅದು ನಿಮ್ಮ ಆರೋಗ್ಯ ವಿಮೆ ವ್ಯಾಪ್ತಿಯನ್ನು ಮೀರಿದ್ದಾಗಬಹುದು.

ಅಂದರೆ ಯುವ ಗ್ರಾಹಕರು ನಾನಾ ಪ್ಲಾನ್ ಆಯ್ಕೆಗಳನ್ನು ಹೊಂದಿರುವುದು ಮಾತ್ರವಲ್ಲದೆ ಅವರ ಆಯ್ಕೆಗಳಲ್ಲಿ ವಿಮಾ ಮೊಬಲಗಿನ ಅವಕಾಶಗಳು ಕೂಡ ಅಧಿಕವಾಗಿರುತ್ತವೆ. ಯುವ ಗ್ರಾಹಕರಿಗೆ 50 ಲಕ್ಷ, ಒಂದು ಕೋಟಿ ಅಥ-ವಾ ಅದಕ್ಕೂ ಹೆಚ್ಚಿನ ವಿಮಾ ಮೊಬಲಗಿನ ಆಫರ್ ನೀಡಲಾಗುತ್ತದೆ.ಅದೂ ಕೂಡ ಕೈಗೆಟಕುವ ಪ್ರೀಮಿಯಂನಲ್ಲಿ. ಹಿರಿಯ ಗ್ರಾಹಕರಿಗೆ ಇಂತಹ ಅಧಿಕ ಮೊಬಲಗುವಿನ ಆಫರ್ ಸಿಗುವುದಿಲ್ಲ. ಯಾಕೆಂದರೆ ಇಲ್ಲಿ ರಿಸ್ಕ್ ಹೆಚ್ಚು, ಪ್ರೀಮಿಯಂ ಕೂಡ ಹೆಚ್ಚು.

**ಹೆರಿಗೆ ಸೌಲಭ್ಯ:** ಚಿಕ್ಕ ವಯಸ್ಸಿನಲ್ಲಿಯೇ ಆರೋಗ್ಯ ವಿಮೆ ಪಾಲಿಸಿಯನ್ನು ಖರೀದಿ ಮಾಡಿದರೆ ಯುವ ದಂಪತಿಗಳು ಇದರ ಸಾಕಷ್ಟು ಪ್ರಯೋಜನಗಳನ್ನು ಪಡೆದುಕೊಳ್ಳಬಹುದು. ಭವಿಷ್ಯದ ಕುಟುಂಬ ಯೋಜನೆಗೂ ಇದು ಅನುಕೂಲ. ಹೆರಿಗೆ ಸೌಲಭ್ಯದಲ್ಲಿ ಪ್ರಸವಪೂರ್ವ ಸೇವೆ, ಹೆರಿಗೆ ಮತ್ತು ಪ್ರಸವನಂತರದ ಸೇವೆ ಸೇರಿದಂತೆ ಇನ್ನಿತರ ಪ್ರಯೋಜನಗಳು ಲಭ್ಯ. ಇದರಿಂದಾಗಿ ತಾಯಿ ಮಗು ಇಬ್ಬ-ರಿಗೂ ಉತ್ತಮ ಆರೋಗ್ಯ ಸೇವಾ ಸೌಲಭ್ಯಗಳು ದೊರೆಯುತ್ತವೆ. ಹೆಚ್ಚುವರಿ ಕಾಯುವ ಅವಧಿ ಇಲ್ಲ ಎನ್ನುವುದು ಇನ್ನೊಂದು ಪ್ಲಸ್-ಪಾಯಿಂಟ್.

**ಕಾಯುವ ಅವಧಿಯ ಅನುಕೂಲ:** ಆರೋಗ್ಯ ವಿಮಾ ಪಾಲಿಸಿಯಲ್ಲಿ ಕೆಲವು ಕಾಯುವ ಅವಧಿಗಳು ಇರುತ್ತವೆ. ಈ ಅವಧಿಗಳು ಮುಗಿದ ಬಳಿಕ ಕ್ಲೈಮ್‌ಗಳ ಪಾವತಿ ಮಾಡಲಾಗುತ್ತದೆ. ಕೆಲವು ಕಾಯುವ ಅವಧಿಗಳನ್ನು ಇಲ್ಲಿ ನೀಡಲಾಗಿದೆ:

1. ಮೊದಲ 30 ದಿನಗಳು-ಆಕಸ್ಮಿಕಗಳನ್ನು ಹೊರತುಪಡಿಸಿ ಬೇರೆ ಯಾವುದೇ ಕ್ಲೈಮ್ ಪಾವತಿ ಮಾಡಲಾಗುವುದಿಲ್ಲ.
2. ಕೆಲವು ರೋಗಗಳು/ಚಿಕಿತ್ಸೆಗಳಿಗೆ ಆರಂಭಿಕ ಎರಡು ವರ್ಷಗಳ ಕಾಯುವ ಅವಧಿ.
3. ಹೆರಿಗೆ ಕಾಯುವ ಅವಧಿ ಒಂಭತ್ತು ತಿಂಗಳಿಂದ ಮೂರು ವರ್ಷಗಳು
4. ಮೊದಲೇ ಅಸ್ತಿತ್ವದಲ್ಲಿರುವ ರೋಗಗಳಿಗೆ ಸುಮಾರು ಮೂರರಿಂದ 4 ವರ್ಷ ಕಾಯುವ ಅವಧಿ.

ಒಂದು ವೇಳೆ ನೀವು ಚಿಕ್ಕ ವಯಸ್ಸಿನಲ್ಲೇ ಆರೋಗ್ಯ ವಿಮೆಯನ್ನು ಆರಂಭಿಸಿದರೆ ಈ ಕಾಯುವ ಅವಧಿಯನ್ನು ಸುಲಭವಾಗಿ ನಿಭಾಯಿಸಬಹುದು.

**ಯೋಗಕ್ಷೇಮ ಸೌಲಭ್ಯ:** ವಾರ್ಷಿಕ ಆರೋಗ್ಯ ತಪಾಸಣೆ, ಲಸಿಕೆ ನೀಡಿಕೆ ಮತ್ತು ಪರೀಕ್ಷೆಯಂತಹ ಪ್ರತಿಬಂಧಕ ಆರೋಗ್ಯ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳುವುದರಿಂದ ನಿಮ್ಮ ಹಣವನ್ನು ಉಳಿತಾಯ ಮಾಡಬಹುದು ಜೊತೆಗೆ ಸುದೀರ್ಘ ಕಾಲದ ವರೆಗೆ ಉತ್ತಮ ಆರೋಗ್ಯವನ್ನೂ ಕಾಯ್ದುಕೊಳ್ಳಬಹುದು. ನಿಮ್ಮ ಜೀವನದ ಆರಂಭಿಕ ಹಂತದಲ್ಲಿಯೇ ಆರೋಗ್ಯ ವಿಮೆಯನ್ನು ಖರೀದಿ ಮಾಡುವುದರಿಂದ ಸಂಭವನೀಯ ಆರೋಗ್ಯ ಸಮಸ್ಯೆಗಳನ್ನು ಬಹುಬೇಗ ಪತ್ತೆ ಮಾಡಬಹುದು ಮತ್ತು ಸಕಾಲದಲ್ಲಿ ಅದಕ್ಕೆ ಸೂಕ್ತ ಚಿಕಿತ್ಸೆಯನ್ನೂ ಪಡೆದುಕೊಳ್ಳಲು ಸಾಧ್ಯವಾಗುತ್ತದೆ.ಇದು ಉತ್ತಮ ಆರೋಗ್ಯವನ್ನು ಕಾಯ್ದುಕೊಳ್ಳಲು ನೆರವಾಗುತ್ತದೆ ಮಾತ್ರವಲ್ಲದೆ ಗಂಭೀರ ಕಾಯಿಲೆ ಬಾರದಂತೆ ತಡೆಯಬಹುದು.

ಒಂದು ವೇಳೆ ನೀವು ಆರೋಗ್ಯಪೂರ್ಣ ಜೀವನ ಶೈಲಿಯನ್ನು ಅನುಸರಿಸಿದರೆ, ನಿಯಮಿತವಾಗಿ ಜಿಮ್, ಯೋಗ, ಈಜು, ವಾಕಿಂಗ್, ರನ್ನಿಂಗ್ ಇತ್ಯಾದಿ ಮಾಡುತ್ತ ಉತ್ತಮ ವ್ಯಾಯಾಮದ ಅಭ್ಯಾಸ ಇಟ್ಟುಕೊಂಡರೆ ವಿಮಾದಾರರು ನಿಮಗೆ

'ಯೋಗಕ್ಷೇಮದ ಅಂಕ'ಗಳನ್ನು ಕೂಡ ಕೊಡುತ್ತಾರೆ. ಇದರಿಂದ ಪ್ರೀಮಿಯಂನಲ್ಲಿ ರಿಯಾಯ್ತಿಯನ್ನು ಪಡೆಯಲು ಬಳಸಿಕೊಳ್ಳಬಹುದು.ನಿಮ್ಮ ವಿಮಾ ಪ್ಲಾನ್‌ಗೆ ತಕ್ಕಂತೆ ಪ್ರೀಮಿಯಂ ನವೀಕರಣದ ಮೇಲೆ ಶೇ.5ರಿಂದ 50ರ ತನಕ ರಿಯಾಯ್ತಿಯನ್ನು ಪಡೆಯಬಹುದು.

**ಕಡಿಮೆ ಪ್ರೀಮಿಯಂಗಳು**

1.ಆರೋಗ್ಯ ವಿಮೆಯಲ್ಲಿ ಪ್ರೀಮಿಯಂ ಲೆಕ್ಕಾಚಾರ ಹಾಕುವಾಗ ಅತ್ಯಂತ ಪ್ರಮುಖ ಅಂಶಗಳಲ್ಲಿ ಒಂದು ವಯಸ್ಸು. ಸಾಮಾನ್ಯವಾಗಿ ವಯಸ್ಸು ಹೆಚ್ಚಾಗುತ್ತಿದ್ದಂತೆ ಪ್ರೀಮಿಯಂ ಕೂಡ ಹೆಚ್ಚುತ್ತದೆ. ಯಾಕೆಂದರೆ ಹಿರಿಯ ನಾಗರಿಕರು ಹೆಚ್ಚು ಆರೋಗ್ಯ ಸಮಸ್ಯೆಗಳನ್ನು ಹೊಂದಿರುತ್ತಾರೆ.

2.ಪ್ರೀಮಿಯಂ ಹೆಚ್ಚಲು ಇನ್ನೊಂದು ಕಾರಣವೆಂದರೆ ಅದು ಈಗಿರುವ ಕಾಯಿಲೆಗಳು. ಈಗಾಗಲೇ ರೋಗ ಸ್ಥಿತಿ ಇದ್ದರೆ ನಿಮ್ಮ ಆರೋಗ್ಯ ವಿಮೆ ಪಾಲಿಸಿಯಲ್ಲಿ ಹೆಚ್ಚು ಪ್ರೀಮಿಯಂ ಪಾವತಿ ಮಾಡಬೇಕಾಗುತ್ತದೆ.

ಈ ಕಾರಣಗಳಿಂದಾಗಿ ಯುವಕರಾಗಿದ್ದಾಗಲೇ ಆರೋಗ್ಯ ವಿಮಾ ಪಾಲಿಸಿ ಪಡೆದುಕೊಳ್ಳುವುದ–ರಿಂದ ದಕ್ಕುವ ನಿರ್ಣಾಯಕ ಪ್ರಯೋಜನಗಳೆಂದರೆ ಕಡಿಮೆ ಪ್ರೀಮಿಯಂ ಮತ್ತು ಸುದೀರ್ಘ ಅವಧಿಗೆ ಪ್ರೀಮಿಯಂಗಳಲ್ಲಿ ಉಳಿತಾಯ.

**ಪಾಲಿಸಿಪೂರ್ವ ವೈದ್ಯಕೀಯ ಪರೀಕ್ಷೆಗಳು**

1. ಮೇಲಿನ ಅಂಶಗಳಲ್ಲಿ ಪ್ರಸ್ತಾಪ ಮಾಡಿದಂತೆ ವಯಸ್ಸಾದಂತೆ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತ ಹೋಗುತ್ತವೆ. ಹಾಗಾಗಿ ವಿಮಾ ಕಂಪನಿಗಳು ಪಾಲಿಸಿಗೂ ಮೊದಲೇ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವಂತೆ ಭವಿಷ್ಯದ ಗ್ರಾಹಕ–ರಿಗೆ ಸೂಚಿಸುತ್ತವೆ. ಅದರಲ್ಲೂ ಮುಖ್ಯವಾಗಿ ಕೆಲವು ವಯಸ್ಸನ್ನು ಮೀರಿದವರಿಗೆ (45 ಮತ್ತು ಅದಕ್ಕೂ ಹೆಚ್ಚಿನ ವರ್ಷ ವಯಸ್ಸಿನವರು) ಅಥವಾ ಪ್ರಸ್ತಾಪಿತ ಅರ್ಜಿಯಲ್ಲಿ ತಮ್ಮ ಆರೋಗ್ಯದ ಸ್ಥಿತಿಗಳನ್ನು ಘೋಷಣೆ ಮಾಡಿದವರಿಗೆ.

2.ಆದರೆ ಆರೋಗ್ಯ ವಿಮಾ ಪಾಲಿಸಿಗಳನ್ನು ಯುವಕರಾಗಿದ್ದಾಗಲೇ ಮಾಡಿಕೊಂಡರೆ ಪಾಲಿಸಿ–ಪೂರ್ವ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವ ಸಾಧ್ಯತೆಗಳು ವಿರಳ. ಅಂತಹ ಸಂದರ್ಭಗಳಲ್ಲಿ ವಿಮಾದಾರರು ತಕ್ಷಣವೇ ಪಾಲಿಸಿಗಳನ್ನು ನೀಡುತ್ತಾರೆ.

**ಕ್ಲೈಮ್ ರಹಿತ ಬೋನಸ್:** ಪಾಲಿಸಿ ವರ್ಷದಲ್ಲಿ ಯಾವುದೇ ಕ್ಲೈಮ್‌ಗಳನ್ನು ಮಾಡದೇ ಇದ್ದರೆ ಅನೇಕ ವಿಮಾ ಕಂಪನಿಗಳು ಕ್ಲೈಮ್ ರಹಿತ ಬೋನಸ್ (No Claim Bonus- NCB) ನೀಡುತ್ತವೆ. ಈ ಬೋನಸ್ ಒಟ್ಟು ಮೊಬಲಗುವಿನ ಮೇಲೆ ಶೇ.5ರಿಂದ ಶೇ.200ರ ವರೆಗೂ ಇರುತ್ತವೆ. ಮುಂದಿನ ಕ್ಲೈಮ್ ರಹಿತ ವರ್ಷಗಳಿಗೂ ಇದನ್ನು ಸಂಗ್ರಹಿಸಬಹುದು. ಇದು ಪ್ರೀಮಿಯಂ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ.

**ಗ್ಯಾರಂಟಿ ಸಂಚಿತ ಬೋನಸ್** (GCB) ಕೂಡ ಕ್ಲೈಮ್ ರಹಿತ ಬೋನಸ್‌ನಂತೇ ಕೆಲಸ ಮಾಡುತ್ತವೆ. ಇದರಲ್ಲಿರುವ ವ್ಯತ್ಯಾಸವೇನೆಂದರೆ ಇದು ಕ್ಲೈಮ್ ಹೊರತಾಗಿಯೂ ಲಭ್ಯ.ಅಂದರೆ ನೀವು ಕ್ಲೈಮ್ ಮಾಡುತ್ತೀರೋ ಇಲ್ಲವೋ ಪ್ರತಿ ವರ್ಷ ಈ ಸೌಲಭ್ಯದಿಂದ ರಿಸ್ಕ್ ಕವರ್ ಇದ್ದೇ ಇರುತ್ತದೆ.

ಉದಾಹರಣೆಗೆ: ಒಂದು ವೇಳೆ ನಿಮ್ಮ ಒಟ್ಟು ವಿಮಾ ಮೊಬಲಗು ಐದು ಲಕ್ಷ ರೂ.ಗಳಿಂದ ಆರಂಭವಾಗಿದ್ದು, ಪಾಲಿಸಿಯು ಕ್ಲೈಮ್ ರಹಿತವಾಗಿದ್ದರೆ ಮುಂದಿನ ಕೆಲ ವರ್ಷಗಳಲ್ಲಿ ಅದು 20 ಲಕ್ಷದಿಂದ 50 ಲಕ್ಷ ರೂ. ತನಕವೂ ಬೆಳೆಯಬಹುದು. ಅದೂ ಕೂಡ ಹೆಚ್ಚುವರಿ ಶುಲ್ಕಗಳು ಇಲ್ಲದೆ.ಇಲ್ಲಿಯೂ ಯುವಕರಿದ್ದಾಗಲೇ ಆರೋಗ್ಯ ವಿಮಾ ಪಾಲಿಸಿಯನ್ನು ಮಾಡಿದರೆ ಪಾಲಿಸಿಯ ಆರಂಭಿಕ ವರ್ಷಗಳಲ್ಲಿ ಕ್ಲೈಮ್ ಮಾಡುವ ಸಾಧ್ಯತೆಗಳು ತೀರಾ ಕಡಿಮೆ ಇರುವುದ–ರಿಂದ ಎನ್‌ಸಿಬಿ ಮತ್ತು ಜಿಸಿಬಿ ಪ್ರಯೋಜನಗಳ ಹೆಚ್ಚು ಲಾಭವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

**ಕೊನೆಯ ಮಾತು:** ಇಡೀ ಹಣ–ಕಾಸು ಯೋಜನೆ, ಸಂಪತ್ತು ಸೃಷ್ಟಿ ಮತ್ತು ಕುಟುಂಬದ ಯೋಗಕ್ಷೇಮದಲ್ಲಿ ಪ್ರಮುಖ ಅಂಶವಾಗಿರುವುದು ಆರೋಗ್ಯ ವಿಮೆ. ಚಿಕ್ಕ ವಯಸ್ಸಿನಲ್ಲೇ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಆರೋಗ್ಯ ವಿಮೆ ಪಡೆದುಕೊಳ್ಳುವುದರಿಂದ ಅನೇಕ ಪ್ರಯೋಜನಗಳು ಲಭ್ಯ ಎನ್ನುವುದು ಮೇಲಿನ ಅಂಶಗಳಿಂದ ಸ್ಪಷ್ಟವಾಗಿದೆ. ಇದರಿಂದ ಆರೋಗ್ಯಪೂರ್ಣ ಮತ್ತು ಸಂರಕ್ಷಿತ ಭವಿಷ್ಯಕ್ಕಾಗಿ ಸದೃಢ ಹಣಕಾಸು ಯೋಜನೆಯನ್ನು ರೂಪಿಸಿದಂತಾಗುತ್ತದೆ. ಹಾಗಾಗಿ ಆರೋಗ್ಯ ವಿಮೆ ಪಾಲಿಸಿಯನ್ನು ಖರೀದಿಸುವ ವಿಚಾರದಲ್ಲಿ ಇನ್ನಷ್ಟು ವಿಳಂಬ ಮಾಡುವ ಅಥವಾ ಕಾಯುವ ಅಗತ್ಯವಿಲ್ಲ. ಮೇಲೆ ಪ್ರಸ್ತಾಪ ಮಾಡಿದ ಪ್ರಯೋಜನಗಳನ್ನು ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಬೇಗ ಆರೋಗ್ಯ ವಿಮೆಯನ್ನು ಖರೀದಿಸುವ ಬಗ್ಗೆ ಯೋಚಿಸಿ.

INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಹಕ್ಕು ತ್ಯಾಗ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

'ಉದ್ಯಮದ ವ್ಯಾಖ್ಯಾನಕ್ಕೆ ಅತ್ಯಂತ ಮುಖ್ಯವಾದುದು ನಿಮ್ಮ ಗ್ರಾಹಕರು ಮತ್ತು ನಿಮ್ಮ ನೌಕರರು ಮಾತ್ರ'